
# ಹೊನ್ನಸಿರಿ

## ನೆನಪಿನ ಸಂಚಿಕೆ









ರಾಯಚೂರು ಜಿಲ್ಲಾ ೩ ನೇಯ
ಕನ್ನಡ ಸಾಹಿತ್ಯ ಸಮ್ಮೇಳನ
೨೬-೨೭ ಫೆಬ್ರುವರಿ ೧೯೯೪ ಸಿಂಧನೂರು.

# ಹೊನ್ನಸಿರಿ

## ನೆನಪಿನ ಸಂಚಿಕೆ

ಪ್ರಧಾನ ಸಂಪಾದಕರು
ಶಾಶ್ವತಸ್ವಾಮಿ ಮುಕ್ಕುಂದಿಮಠ

ಸ್ವಾಗತ ಸಮಿತಿ
ರಾಯಚೂರು ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನ
ಸಿಂಧನೂರು
೨೬, ೨೭ ಫೆಬ್ರುವರಿ, ೧೯೯೪

# ಹೊನ್ನಸಿರಿಯ ಪುಟಗಳಲ್ಲಿ


## ಗೊನೆ ಒಂದು : ನಮ್ಮ ಸಂಗತಿ

- ☆ ಸಂದೇಶಗಳು vi
- ☆ ಸ್ವಾಗತ ಸಮಿತಿ ಅಧ್ಯಕ್ಷರ ಸ್ವಾಗತ ಭಾಷಣ xi
- ☆ ಸಮ್ಮೇಳನಾಧ್ಯಕ್ಷರ ಭಾಷಣ xiv
- ☆ ಜಾನಪದ ಸಂಸ್ಕೃತಿ ಭಂಡಾರಿ : ಡಾ।। ಹಕಾರಿ / ಡಿ. ಎಚ್. ಕಂಬಳಿ xxiii

## ಗೊನೆ ಎರಡು : ನಮ್ಮ ಜಿಲ್ಲೆಯ ಸಾಹಿತ್ಯ

೫. ವಚನ ಸಾಹಿತ್ಯ / ಡಾ. ಬಸವರಾಜ ಸೊಪ್ಪಿಮಠ ೧
೬. ದಾಸ ಸಾಹಿತ್ಯ / ಸೀಮಾಮ ಲಿಂಗಸೂಗೂರು ೮
೭. ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯ / ಶಾಶ್ವತಸ್ವಾಮಿ ಮುಕ್ಕುಂದಿಮಠ ೧೫
೮. ನವೋದಯ ಸಾಹಿತ್ಯ / ಜಿ. ಕೃಷ್ಣರಾವ ೨೦
೯. ಜಾನಪದ ಸಾಹಿತ್ಯ / ಈರಣ್ಣ ಕೋಸಗಿ ೨೪
೧೦. ದಲಿತ ಸಾಹಿತ್ಯ / ಬಾಬು ಭಂಡಾರಿಗಲ್ ೨೮
೧೧. ಅನುಭಾವಿ ಕವಿಗಳು / ಡಾ. ವ್ಹಿ. ಜಿ. ಪೂಜಾರ ೩೨
೧೨. ಹರಿದಾಸರು ರಚಿಸಿದ ಬಯಲಾಟಗಳು / ಎನ್. [illegible]ಮನಗೌಡ ೩೬

## ಗೊನೆ ಮೂರು : ನಮ್ಮ ಜಿಲ್ಲೆಯ ಸಂಪ್ರದಾಯಗಳು ಮತ್ತು ಜೀವನ

೧೩. ಸಂಪ್ರದಾಯಗಳು / ಡಾ. ಕೆ. ಜಿ. ಜೋಶಿ ೩೮
೧೪. ಹಿಂದು–ಮುಸ್ಲಿಂರ ಸಾಮಾಜಿಕ ಜೀವನ / ಆಯ್. ಎಸ್. ಗಿರಡ್ಡಿ ೪೧
೧೫. ಸಾಮಾಜಿಕ ಚಳುವಳಿಗಳು / ಡಾ। ಬಸವಪ್ರಭು ಪಾಟೀಲ, ಬೆಟ್ಟದೂರ ೪೩
೧೬. ಮಹಿಳೆಯರ ಸ್ಥಿತಿ–ಗತಿಗಳು / ಶ್ರೀಮತಿ ಮೀನಾಕ್ಷಿ ಖಂಡಿಮಠ ೪೬
೧೭. ಬದುಕು : ಸಹಬಾಳ್ವೆ / ಎಂ. ನಾಗಪ್ಪ ೫೦
೧೮. ಮಹಾನುಭಾವರು : ಕಲೆ / ಹಿರಿರಾಜ ಹೊಸಮನಿ ೫೫
೧೯. ಕನ್ನಡ – ತೆಲುಗು ಭಾಷಾ ಬಾಂಧವ್ಯ / ಎಂ. ಲಕ್ಷ್ಮಣ ೫೯

## ಗೊನೆ ನಾಲ್ಕು : ನಮ್ಮ ಜಿಲ್ಲೆಯ ಸಂಶೋಧನೆ ಮತ್ತು ಇತಿಹಾಸ

೨೦. ಗಬ್ಬೂರು : ಐತಿಹಾಸಿಕ ಸ್ಥಳ / ಪರಮೇಶ್ವರ ೬೩
೨೧. ಇತಿಹಾಸ ಸಂಶೋಧನೆಗಳು / ಡಾ. ಚೆನ್ನಬಸಪ್ಪ ಪಾಟೀಲ ೬೬
೨೨. ಶಾಸನಗಳು : ಒಂದು ಸಾಂಸ್ಕೃತಿಕ ಸಮೀಕ್ಷೆ / ರಂಗರಾಜ ವನದುರ್ಗ ೭೧

## ಗೊನೆ ಐದು : ನಮ್ಮ ಜಿಲ್ಲೆಯ ಕೃಷಿ ಮತ್ತು ಪ್ರಸಾರ

೨೩. ಸಮೂಹ ಮಾಧ್ಯಮಗಳು ಮತ್ತು ಕನ್ನಡ ಪ್ರಸಾರ / ಚೆನ್ನಬಸವ ಹಿರೇಮಠ ೭೯
೨೪. ಕನ್ನಡ ಸಾಹಿತ್ಯಕ್ಕೆ ಜಿಲ್ಲೆಯ ಕಾನೂನು ಕೊಡುಗೆ / ಎಸ್. ರುದ್ರಯ್ಯ ಹಾಗೂ ಎಚ್. ಜಗದೀಶ ೮೪
೨೫. ತುಂಗಭದ್ರಾ ಎಡದಂಡೆ ಯೋಜನೆಯಿಂದ ಕೃಷಿಯಲ್ಲಿ ಪ್ರಗತಿ / ಬೆಳಗುರಿಕಿ ಹನುಮನಗೌಡ ೮೬
೨೬. ನೆನಗುದಿಗೆ ಬಿದ್ದಿರುವ ಕೃಷ್ಣಾ ಮೇಲ್ದಂಡೆ ಬಲದಂಡೆ ಕಾಲುವೆ / ಎನ್. ಚಂದ್ರಶೇಖರಯ್ಯ ೯೧
೨೭. ಸಹಜ ಕೃಷಿ ಪದ್ಧತಿ / ಡಾ. ಎಸ್. ವಿ. ಪಾಟೀಲ ೯೩

## [illegible] ಆರು : ನಮ್ಮ ಜಿಲ್ಲೆಯ ಕವಿ – ಸಾಹಿತಿ – ಸಂಗಿತ ಕಲಾವಿದರು


೨೮. ಚಿದಾನಂದಾವಧೂತರು ಮತ್ತು ಅವರ ಕೃತಿಗಳು / ಸಿದ್ಧಲಿಂಗಪ್ಪ ಪಾಟೀಲ ೯೫
೨೯. ವಾಗಭೂಷಣರ ಕೃಷಿಜ್ಞಾನ ಪ್ರದೀಪಿಕೆ / ಸಿ. ಶರಣಪ್ಪ ೧೦೦
೩೦. ಗಡೇಕಲ್ಲ ಸಂಗವಿಭು ಕವಿಯ ಕೃತಿಗಳು / ಉಮೇಶ ಹೆಸರೂರ ೧೦೨
೩೧. ಶ್ರೀ ರಾಮದಾಸರು / ಶರಣಪ್ಪ ಗುಡದಿನ್ನಿ ೧೦೬
೩೨. ದಿದ್ದಿಗಿ ಭೀಮಸೇನರಾಯರು / ಡಾ. ಮಂದಾಕಿನಿ ೧೧೦
೩೩. ಮಾನ್ವಿ ಸರಸಿಂಗರಾವ / ಶ್ರೀಮತಿ ಶೀಲಾ ದಾಸ ೧೧೪
೩೪. ಸವ್ಯಸಾಚಿ ಸಿದ್ದಯ್ಯ ಪುರಾಣಿಕ / ಸುಭಾಶ್ಚಂದ್ರ ಕಾಲಗಿ ೧೧೬
೩೫. ನ್ಯಾಯನಿಷ್ಠುರಿ ನಾನಲ್ಲ ಶಾಂತರಸ / ಡಾ. ಎಂ. ಎಸ್. ಪಾಟೀಲ ೧೧೮
೩೬. ಗೋರೇಬಾಳ ಹನುಮಂತರಾವ / ಸ್ವಾಮಿರಾವ ಕುಲಕರ್ಣಿ ೧೨೧
೩೭. ಕಾವ್ಯೋದ್ದೇಶ / ವಸಂತ ಕುಷ್ಟಗಿ ೧೨೪
೩೮. ಸಂಗೀತದ್ವಯರು / ಅಯ್ಯಪ್ಪ ತುಕ್ಕಾಯಿ ೧೨೮
೩೯. ಪಂಡಿತ ಶಿವರಾಜ ಗವಾಯಿ / ಚೆನ್ನಯ್ಯ ಸಗರಪುರ ೧೩೩
೪೦. ಜಿಲ್ಲೆಯ ಶಿಕ್ಷಣ : ದಾಪುಗಾಲು / ಟಿ. ವಿ. ಮಾಗಳದ ೧೩೫
೪೧. ಸಂಗಿತಮಾಣಿಕ್ಯ ಮಾಣಿಕರಾವ ರಾಯಚೂರಕರ / ಕೆ. ಎಂ. ಪುರದ ೧೪೦
೪೨. ಕಲಾವಿದ ಬೆಟ್ಟದೂರ ಶಂಕರಗೌಡ / ಎಂ. ಕೃಷ್ಣ ೧೪೩
೪೩. ಸೆಟೆಲ್‌ಕಾಕ್ ಮೋಡಿಕಾರ : ರುದ್ರಮುನಿ / ಕೆ. ಎಸ್. ನಾಯಕ ೧೪೫
೪೪. ವರದಿ : ರಾಯಚೂರು ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ ೧೪೬
೪೫. ವರದಿ : ಸಿಂಧನೂರು ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ೧೪೮
೪೬. ವಿವಿಧ ಸಮಿತಿಗಳ ಸದಸ್ಯರು. ೧೫೧


☆☆☆

# ಸವ್ಯಸಾಚಿ ಸಿದ್ದಯ್ಯ ಪುರಾಣಿಕರು

**ಸುಭಾಶ್ಚಂದ್ರ, ಎಂ. ಕೌಲ**
ಕನ್ನಡ ಅಧ್ಯಾಪಕರು, ಸರಕಾರಿ ಮಹಾವಿದ್ಯಾಲಯ
ಸಿಂಧನೂರು

ಕನ್ನಡ ಸಾಹಿತ್ಯಕ್ಕೆ ರಾಯಚೂರು ಜಿಲ್ಲೆ ನೀಡಿರುವ ಪ್ರತಿಭಾವಂತರಲ್ಲಿ ಅತ್ಯಂತ ಮಹತ್ವಪೂರ್ಣರಾದವರೆಂದರೆ ಸಿದ್ದಯ್ಯ ಪುರಾಣಿಕರು. ಕಾವ್ಯಾನಂದರೆಂದೇ ಚಿರಪರಿಚಿತರಾಗಿರುವ ಪುರಾಣಿಕರು ಸಜ್ಜನಕವಿ, ಅಜಾತ ಶತ್ರು, ನಿರ್ಮತ್ಸರಿ ನಿರ್ಮಲ ಚಿತ್ತರು – ಸರಳ ಬದುಕಿನ ಶರಣ ಜೀವಿಗಳು, ಎಲ್ಲರನ್ನೂ ತನ್ನವರೆನ್ನುವ ಹಿರಿಯ ಗುಣದವರು, ವಿಶಾಲ ಸಹೃದಯಿಗಳು, ಸ್ನೇಹಪರರು, ....... ಹೀಗೆ ಹಲವು ಗುಣಗಳ ಸಾಕಾರಮೂರ್ತಿಗಳು ಸಿದ್ದಯ್ಯ ಪುರಾಣಿಕರು.

ಕಾವ್ಯಾನಂದರ ಹುಟ್ಟೂರು ರಾಯಚೂರು ಜಿಲ್ಲೆಯ ದ್ಯಾಂಪೂರು. ಪಂಡಿತ ಕಲ್ಲಿನಾಥಶಾಸ್ತ್ರಿ, ಸಾಧ್ವಿ ದಾನಮ್ಮನವರ ಮಗನಾಗಿ ೧೯೧೮ರಲ್ಲಿ ಜನಿಸಿದರು. ಬಹಳ ಬಡತನದ ಸಂಸಾರ. ಬಾಲಕ ಸಿದ್ದಯ್ಯನಿಗೆ ಓದಬೇಕೆಂಬ ಅದಮ್ಯ ಉತ್ಸಾಹ. ಮಗನ ಆಕಾಂಕ್ಷೆಗೆ ಬಡ ತಂದೆ – ತಾಯಿಗಳು ಶ್ರಮ ಪಟ್ಟು ಸಹಕರಿಸಿದರು. ಮಗ ಕಷ್ಟಪಟ್ಟು ವ್ಯಾಸಂಗ ಮಾಡತೊಡಗಿದ. ಇಂಟರ್ ಪರೀಕ್ಷಾ ಸಮಯಕ್ಕೆ ಆಕಸ್ಮಿಕ ಅಸ್ವಸ್ಥತೆ ಬಂದೆರಗಿತು. ವಿಧಿ ಸಿದ್ದಯ್ಯನವರ ಉತ್ಸಾಹಕ್ಕೆ ತಣ್ಣೀರೆರಚಿತು. ಆದರೂ ನಿರಾಸೆಗೊಳ್ಳಲಿಲ್ಲ. ಸುದೀರ್ಘ ಕಾಲ ರೋಗಿಯಾಗಿ ಬಳಲಿ, ಗುಣಮುಖನಾದ ಮೇಲೆ ಖಾಸಗಿಯಾಗಿ ಇಂಟರ್ ಪರೀಕ್ಷೆ ಪಾಸು ಮಾಡಿದರು. ಕನ್ನಡ–ಸಂಸ್ಕೃತಗಳಲ್ಲಿ ಮೊದಲನೆಯವರಾಗಿ, ಇಂಗ್ಲೀಷ್‌ನಲ್ಲಿ ಎರಡನೆಯವರಾಗಿ, ಒಟ್ಟಿನಲ್ಲಿ ವಿಶ್ವವಿದ್ಯಾಲಯಕ್ಕೆ ಮೂರನೆಯವರಾಗಿ ಉತ್ತೀರ್ಣರಾಗಿ ಅದ್ಭುತ ಯಶಸ್ಸನ್ನು ಪಡೆದರು; ಪ್ರಶಂಸೆಯ ಪ್ರೀತಿಗೆ ಪಾತ್ರರಾದರು.

ಪದವಿ ವ್ಯಾಸಂಗಕ್ಕೆ ಹೈದ್ರಾಬಾದಿಗೆ ಹೋಗಬೇಕಾಗಿ ಬಂತು. ಇಲ್ಲಿಯೂ ಬಡತನ ಸಿದ್ದಯ್ಯನವರನ್ನು ಕಾಡಿತು. ಪ್ರತಿಭೆಗೆ ಪ್ರೋತ್ಸಾಹ ಇರುತ್ತದೆ ಎನ್ನುವಂತೆ, ಸಿದ್ದಯ್ಯನವರ ಪ್ರತಿಭೆಗೆ ಪ್ರೋತ್ಸಾಹಿಸಿ, ವ್ಯಾಸಂಗ ಮುಂದುವರಿಸಲು ಕಾರಣರಾದವರೆಂದರೆ ಪ್ರಿನ್ಸಿಪಾಲ ಹಕ್ಕಾನಿ ಸಾಹೇಬರು. ಹೈದ್ರಾಬಾದಿನ ಅಲಿಖಾನರಿಗೆ ಇವರು ಪತ್ರ ಕೊಟ್ಟಾಗ ಪ್ರೊ. ಅಲಿಖಾನರು ಸಿದ್ದಯ್ಯನವರ ಫೀಜು ಮಾಫ್ ಮಾಡಿ, ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು. ಬರುವ ವಿದ್ಯಾರ್ಥಿ ವೇತನದಲ್ಲಿ 'ಸಿ' ಹಾಸ್ಟೆಲ್ ಸೇರಿದ ಸಿದ್ದಯ್ಯನವರು ಅಲ್ಲಿರುವಷ್ಟು ಕಾಲ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ವೀರಶೈವ ತರುಣ ಸಂಘದ ವಾರ್ಷಿಕೋತ್ಸವಕ್ಕಾಗಿ ಬಸವಣ್ಣನವರನ್ನು ಕುರಿತ ನಾಟಕವನ್ನು ಕೇವಲ ಎರಡೇ ದಿನಗಳಲ್ಲಿ ಬರೆದು ಮುಗಿಸಿದ ಅಗ್ಗಳಿಕೆ ಇವರದು. ಅದೇ 'ಆತ್ಮಾರ್ಪಣ' ಇವರ ಚೊಚ್ಚಲು ಕೃತಿ. ಸ್ವತಃ ನಾಟಕದಲ್ಲಿ ಬಸವಣ್ಣನ ಪಾತ್ರವಹಿಸಿ, ಅಮೋಘ ಅಭಿನಯದಿಂದ ತೆಲುಗರು ತಲೆದೂಗುವಂತೆ ಮಾಡಿದ ಕೀರ್ತಿ ಸಿದ್ದಯ್ಯನವರದು.

ವಿಶ್ವವಿದ್ಯಾಲಯದಲ್ಲಿ 'ಕರ್ನಾಟಕ ಸಂಘ' ಸ್ಥಾಪಿತವಾದಾಗ ಉಪಾಧ್ಯಕ್ಷ ಸ್ಥಾನ ಇವರಿಗೆ ಲಭಿಸಿತು. ವೈವಿಧ್ಯಮಯ ಕಾರ್ಯಕ್ರಮಗಳನ್ನು ಏರ್ಪಡಿಸಿ ಕನ್ನಡದ ಕಂಪನ್ನು ಪಸರಿಸುವಂತೆ ಮಾಡಿದರು. ಬಿ.ಎಂ.ಶ್ರೀ., ಮಾಸ್ತಿ, ಅ.ನ.ಕೃ., ತೀನಂಶ್ರೀ, ರಾಜರತ್ನಂ ಅವರಂತಹ ದಿಗ್ಗಜಗಳ ಮಾತುಗಳು ಕಾವ್ಯಾನಂದರ ಸಾಹಿತ್ಯ ಅಭಿರುಚಿಯ ಸಸಿಗೆ ನೀರೆರೆದು ಪೋಷಿಸಿದವು.

ವಿದ್ಯಾರ್ಥಿ ಜೀವನದಲ್ಲಿ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದ ಸಿದ್ದಯ್ಯನವರಿಗೆ ಸುಖದ ಜೀವನ ಕೈ ಮಾಡಿ ಕರೆಯಿತು. ವ್ಯಾಸಂಗ ಪೂರ್ತಿಗೊಳಿಸುತ್ತಲೇ ತಹಶೀಲ್ದಾರರಾಗಿ ನಿಯುಕ್ತಿಗೊಂಡರು. ಅಧಿಕಾರ ಬಂದಾಗ ತಮ್ಮ ಆದರ್ಶಗಳನ್ನು ನುಚ್ಚುನೂರು ಮಾಡಲಿಲ್ಲ. ಮತ್ತಷ್ಟು ಗಟ್ಟಿಗೊಳಿಸಿಕೊಂಡರು. ಅಧಿಕಾರದ ವ್ಯಾಮೋಹದಲ್ಲಿ ಭ್ರಷ್ಟತೆ, ಅಪ್ರಾಮಾಣಿಕತೆಗೆ ಬಲಿಯಾಗಲಿಲ್ಲ. ಸಲ್ಲದ ಗೌರವಗಳಿಗೆ ಮನ ಸೋತು ಅಲ್ಲದ ಕಾರ್ಯಗಳನ್ನು ಯಾವತ್ತೂ ಮಾಡಲಿಲ್ಲ. ಅತ್ಯಂತ ಸ್ವಚ್ಛ, ದಕ್ಷ, ಪ್ರಾಮಾಣಿಕ ಆಡಳಿತಗಾರರೆಂಬ ಕೀರ್ತಿಗೆ ಭಾಜನರಾದರು. ತಮ್ಮ ಅಧಿಕಾರದುದ್ದಕ್ಕೂ ಪ್ರಾಮಾಣಿಕ ಆಡಳಿತಗಾರರಾಗಿ, ಸತ್ವಯುತ ಸಾಹಿತ್ಯ ರಚಿಸಿ ಸವ್ಯಸಾಚಿಗಳಾದರು.

ಆಡಳಿತದಲ್ಲಿ ಚುರುಕುತನ ಸಾಧಿಸಿದಂತೆ, ಸಾಹಿತ್ಯದಲ್ಲಿ ಹಿರಿತನ ಮೆರೆದ ಖ್ಯಾತಿ ಕಾವ್ಯಾನಂದರದು. "ಓದಿ ಬ್ರಾಹ್ಮಣನಾಗು, ಕಾದಿ ಕ್ಷತ್ರಿಯನಾಗು ..... ನಿನ್ನೊಲವಿ

ನಂತಾಗು ಏನಾದರೂ ಆಗು ಮೊದಲು ಮಾನವನಾಗು" ಎಂಬ ಮಾತು ನಮ್ಮ ಮನುಕುಲಕ್ಕೆ ಮಹಾಮಂತ್ರವಾಗಿದೆ. ಇಂತಹ ಭವ್ಯ ವಿಚಾರಗಳಿಂದ ಕೂಡಿದ ಕಾವ್ಯಾನಂದರ ವಚನಗಳನ್ನು ಇಂದಿನ ಸಮಾಜ ಪಚನಮಾಡಿಕೊಳ್ಳ ಬೇಕಾದ ಜರೂರಿ ಇದೆಯೆಂಬ ಮಾತನ್ನು ಯಾವತ್ತೂ ಮರೆಯುವಂತಿಲ್ಲ.

'ಜಲಪಾತ ಬಂತು' ಕಾವ್ಯಾನಂದರ ಮೊದಲ ಕಾವ್ಯ ಸಂಕಲನ. 'ಹಾಲ್ದೆನೆ', 'ಮರುಳಸಿದ್ಧನ ಕಂತೆ', 'ಮೊದಲು ಮಾನವನಾಗು', 'ಚರಗ', 'ಕಲ್ಲೋಲ ಮಾಲೆ', 'ಕರುಣಾಶ್ರಾವಣ' ಮುಂತಾದವು ಅವರ ಲೇಖನಿಯಿಂದ ಮೂಡಿಬಂದ ಇತರ ಕವನ ಸಂಕಲನಗಳು. ಸಿದ್ದಯ್ಯನವರ ದೈತ್ಯ ಪ್ರತಿಭೆಯಿಂದ ಸಾಕಾರಗೊಂಡ ಕಾವ್ಯ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರವಾಗಿ ನಿಲ್ಲುವಂಥದ್ದು. ಯುಗದ ಪ್ರಶ್ನೆಯನ್ನು ಅತ್ಯಂತ ಸಮರ್ಥವಾಗಿ ತಮ್ಮ ಕೃತಿಗಳಲ್ಲಿ ಕಟ್ಟಿಕೊಡುವ ಕಾವ್ಯಾನಂದರು ಮಹಾಸತ್ವದ ಕವಿಯೆಂಬುದು ನಿಸ್ಸಂದೇಹ.

ಶರಣ ಸಂಪ್ರದಾಯದ ಸಂಸ್ಕೃತಿಯನ್ನು ಸಿದ್ದಯ್ಯನವರು ಉಳಿಸಿಕೊಂಡು ಬಂದಿದ್ದಾರೆನ್ನುವುದಕ್ಕೆ ಅವರು ಬರೆದ ಶರಣರ ಚರಿತ್ರೆಗಳೇ ಸಾಕ್ಷಿ. 'ಬಸವಣ್ಣನವರ ಜೀವನ ಹಾಗೂ ಸಂದೇಶ', 'ಮಹಾದೇವಿ', 'ಸಿದ್ಧರಾಮ', 'ಅಲ್ಲಮಪ್ರಭು' ಮುಂತಾದ ಶರಣರ ಭವ್ಯ ಜೀವನವನ್ನು ಹೃದಯಸ್ಪರ್ಶಿಯಾಗಿ ನಿರೂಪಿಸಿದ್ದಾರೆ. ಶರಣರ ಮಹಾ ಜೀವನ ಇಂದಿನ ನಮ್ಮ ಬದುಕಿಗೆ ಮಾರ್ಗದರ್ಶಿ ಯಾಗಬೇಕೆನ್ನುವ ಮಹದಾಸೆ ಕಾವ್ಯಾನಂದರದು.

ನಾಟಕ ಪ್ರಕಾರದಲ್ಲಿಯೂ ಕಾವ್ಯಾನಂದರು ಕೃಷಿ ಮಾಡಿದ್ದಾರೆ. 'ಆತ್ಮಾರ್ಪಣೆ', 'ಭಾರತವೀರ', 'ರಜತರೇಖೆ' ಹಾಗೂ 'ಭಗ್ನನೂಪುರ'ದಂತಹ ಉತ್ಕೃಷ್ಟ ನಾಟಕಗಳನ್ನು ರಚಿಸಿದ್ದಾರೆ.

ಕಾವ್ಯಾನಂದರ ಸಾಹಿತ್ಯ ಕೃಷಿ ಬಹಳ ವಿಶಾಲ ವಾದುದು. ಕಾವ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ ಹೀಗೆ ಎಲ್ಲ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ ಅಗ್ಗಳಿಕೆ ಪುರಾಣಿಕರದು. ಅವರ ಯಾವುದೇ ಕೃತಿಯನ್ನು ಕೈತೊಳೆದುಕೊಂಡು ಮುಟ್ಟ ಬೇಕಾದಂತಹ ಮಹತಿಯನ್ನು ಪಡೆದಿವೆ.

ಶರಣ ಜೀವಿಯಾದ ಸಿದ್ದಯ್ಯ ಪುರಾಣಿಕರು ಸಾತ್ವಿಕ ಮನೋಭಾವದವರು. ಎಂತಹ ಕಿರಿಯರನ್ನೂ ಆತ್ಮೀಯತೆಯಿಂದ ಕಾಣುವ ಹಿರಿತನ ಅವರದು. ಸ್ವಭಾವತಃ ಮೃದುಭಾಷಿಯಾದ ಅವರ ಮಾತುಗಳು ಬಲು ಮಧುರ; ಸಾಹಿತ್ಯವಂತೂ ಇನ್ನೂ ಮಧುರ. ಇಂತಹ ಮಹಾ ಚೇತನ ವನ್ನು ಪಡೆದ ರಾಯಚೂರು ಜಿಲ್ಲೆಗೆ ಹೆಮ್ಮೆಯಲ್ಲದೆ ಮತ್ತಿನ್ನೇನು?

●○●

## ರಹಸ್ಯ

ಜಗದಗಲಕ್ಕೂ
ಹಾವಿನಂತೆ
ಹರಿದಾಡಿದ
ಕಪ್ಪು ರಸ್ತೆಗಳೆ
ನಿಮಗೇನಾದರೂ ಗೊತ್ತೆ
ಬದುಕಿನ ಮೂಲ ?

– ಗುವೀ

## ಮುಗ್ಧತೆ

ನನ್ನವಳು
ಹೃದಯ ಬಿಚ್ಚಿ
ಮುತ್ತಿಕ್ಕಲು
ಹತ್ತಿರ ಬಂದಾಗ
ಕೆನ್ನೆಯನ್ನು ಕೊಟ್ಟಿದ್ದೆ
ಅವಳ ತುಟಿಗಳಿಗೆ
ಮೌನವಾಗಿ

– ಗುವೀ